ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-24 ಸಂಚಿಕೆ-4 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಂಕರ ಜಯಂತಿ–ಪೂರ್ವಭಾವಿ ಸಭೆ

ಇದೇ ಬರುವ ಏಪ್ರಿಲ್ 21ರಿಂದ ಮೇ 5ರ ವರೆಗೆ ಜಗದ್ಗುರು ಶ್ರೀ ಶಂಕರ ಜಯಂತಿ ಪ್ರಯುಕ್ತ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಬಹುದು ಎಂಬ ಶೃಂಗೇರಿಯ ಜಗದ್ಗುರುಗಳು ಹಾಗೂ ಆಡಳಿತಾಧಿಕಾರಿಗಳ ಮಾರ್ಗದರ್ಶನವಿರುವಂತೆ ಅದ್ವೈತ ತತ್ವಾನುಯಾಯಿಗಳಾದ ಎಲ್ಲ ಸಂಘಟನೆಗಳ ಸಹಕಾರದಿಂದ ಜಿಲ್ಲೆಯಾದ್ಯಂತ ವೈವಿಧ್ಯಮಯವಾಗಿ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಬೇಕೆಂಬ ನೆಲೆಯಲ್ಲಿ ದಿನಾಂಕ 09– 04–2023ರ ಭಾನುವಾರ ಸಂಜೆ 4.30 ಗಂಟೆಗೆ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಅದ್ವೈತಿಗಳೆಲ್ಲರ ಸಮಾಲೋಚನಾ ಸಭೆಯನ್ನು ಉಡುಪಿ ಜಿಲ್ಲಾ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ವತಿಯಿಂದ ಕರೆಯಲಾಯಿತು.

ಈ ಸಭೆಯಲ್ಲಿ ಜಿಲ್ಲೆಯ ಎಲ್ಲಾ ಶ್ರೀ ಶಾಂಕರ ತತ್ವ ಅನುಯಾಯಿ ಸಂಘಟನೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪಾಲ್ಗೊಂಡು ಸೂಕ್ತ ಸಲಹೆ ಸೂಚನೆ ನೀಡುವಂತೆ ವಿನಂತಿಸಿಕೊಳ್ಳಲಾಗಿತ್ತು. ಅದರಂತೆ ಬಾರ್ಕೂರು , ಕಾರ್ಕಳದ ಸ್ಥಾನಿಕ ಸಂಘಟನೆಗಳ ಪದಾಧಿಕಾರಿಗಳು, ಖಾರ್ವಿ, ಮರಾಠಿ, ಹವ್ಯಕ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲಾ ಸಂಚಾಲಕ ಶ್ರೀ ವಿಶ್ವನಾಥ ಶ್ಯಾನುಭಾಗ್ ವಹಿಸಿದ್ದು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಕ್ಷೇತ್ರ ಶೃಂಗೇರಿಯ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿ ವೇದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದು ಶ್ರೀ ಶಂಕರ ಜಯಂತಿ ಆಚರಣೆ ಸಂದರ್ಭ ಅನುಸರಿಸಬೇಕಾದ ವಿಚಾರಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ತಾಲೂಕು ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಧನ್ಯವಾದವಿತ್ತರು. ತಾಲೂಕು ಸಂಚಾಲಕರಾದ ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದ್ದರು.

## ಶ್ರೀ ಶಾರದಾ ಮಂಟಪ

ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102,
ಫೋ : 0820–2958444, 8971185844



### ನವೀಕೃತ ಹವಾನಿಯಂತ್ರಿತ ಸಭಾಂಗಣ ಉದ್ಘಾಟನೆ

**ದಿನಾಂಕ 29.04.2023 ಶನಿವಾರ ಸಮಯ 5.30 ಸಾಯಂಕಾಲ**

**ಉದ್ಘಾಟನೆ ಹಾಗೂ ಆಶೀರ್ವಚನ :**
**ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ,** ಶ್ರೀ ಪೇಜಾವರ ಮಠ, ಉಡುಪಿ.

**ಮುಖ್ಯ ಅತಿಥಿಗಳು :**
**ಶ್ರೀ ರಂಜನ್ ಕಲ್ಕೂರ್,** ಉದ್ಯಮಿ, ಉಡುಪಿ
**ಡಾ| ವೈ. ಸುದರ್ಶನ್ ರಾವ್,** ಸರ್ಜನ್, ಇಂಚರ ಸರ್ಜಿಕಲ್ ಕ್ಲಿನಿಕ್, ಉಡುಪಿ
**ಶ್ರೀ ನಿತ್ಯಾನಂದ ಕಾಮತ್,** ಉದ್ಯಮಿ, ಕುಂಜಿಬೆಟ್ಟು, ಉಡುಪಿ

ಸಂಜೆ 4.30ರಿಂದ ಸುಗಮ ಸಂಗೀತ ಕಾರ್ಯಕ್ರಮ ಜರಗಲಿದೆ

~: ಸರ್ವರಿಗೂ ಹಾರ್ದಿಕ ಸ್ವಾಗತ :~

ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಆಡಳಿತ ಮಂಡಳಿ
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | |
|---|---|
| 34. ಜ್ಞಾನಶಕ್ತಿ ಟ್ರಸ್ಟ್, ಬೆಂಗಳೂರು | 10,00,000/– |
| 35. ಪ್ರದೀಪ್ ಕುಮಾರ್ ಪಂಜ, ಬೆಂಗಳೂರು | 2,00,000/– |
| 36. ಎನ್. ಅರವಿಂದ ರಾವ್, ಮಂಗಳೂರು | 2,00,000/– |
| 37. ಚೈತನ್ಯಕುಮಾರ್ ಕೆ.ಎಸ್. ಲ್ಯಾಲ, ಬೆಳ್ತಂಗಡಿ | 1,00,000/– |
| 38. ಶ್ರೀವತ್ಸ ವಿ. ಶಾಸ್ತ್ರೀ | 1,00,000/– |
| 39. ಗೌರೀ ವಿ. ಶಾಸ್ತ್ರೀ | 1,00,000/– |
| 40. ಶ್ರೀಮತಿ ವತ್ಸಲಾ ಜನಾರ್ದನ ರಾವ್, ಉಪ್ಪಿನಂಗಡಿ | 1,00,000/– |
| 41. ಅಶೋಕ್ ಕುಮಾರ್ ಬೆಟ್ಟಂಪಾಡಿ, ಪುತ್ತೂರು | 1,00,000/– |
| 42. ಡಾ| ಲೋಕೇಶ್ ರಾವ್ ಬಿ.ಕೆ., ಉಡುಪಿ | 1,00,000/– |
| 43. ಶ್ರೀಮತಿ ಸೀತಾಲಕ್ಷ್ಮೀ ದಿನೇಶ್ ಕುಮಾರ್, ಉಜಿರೆ | 1,00,000/– |

(ಮುಂದುವರಿಯುವುದು....)

ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.


*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ,** ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-2.



ಶ್ರೀ ಶಾರದಾ ದೇವಸ್ಥಾನದಲ್ಲಿ

### ಶ್ರೀ ಶಂಕರ ಜಯಂತಿ ಆಚರಣೆಯು

ತಾ.25-04-2023ನೇ ಮಂಗಳವಾರ ನೆರವೇರಲಿದೆ.

ಕಾರ್ಯಕ್ರಮಗಳ ವಿವರ : ಬೆಳಿಗ್ಗೆ 8-30 ಗಂಟೆಗೆ ಪ್ರಾರ್ಥನೆ
ಶ್ರೀ ಶಂಕರ ಅಷ್ಟೋತ್ತರ ಪಾರಾಯಣ, ಶ್ರೀ ಶಂಕರ ವಿಜಯ ಪಾರಾಯಣ,
ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ
ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ
ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ
ಬೆಳಿಗ್ಗೆ 10 ಗಂಟೆಗೆ ಲಿಖಿತ ರಸಪ್ರಶ್ನೆ ಸ್ಪರ್ಧೆ ವಿಷಯ : ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ
ಪ್ರಾಥಮಿಕ ವಿಭಾಗ : 7ನೇ ತರಗತಿ ವರೆಗೆ, ಪ್ರೌಢ ವಿಭಾಗ : 10ನೇ ತರಗತಿ ವರೆಗೆ
ಹಿರಿಯರ ವಿಭಾಗ : ಪಿಯುಸಿ ಮೇಲ್ಪಟ್ಟು

ನೋಂದಣೆ ಹಾಗೂ ಮಾಹಿತಿಗಾಗಿ ಸಂಪರ್ಕಿಸಿ :ಶ್ರೀ ಕೃಷ್ಣಕುಮಾರ್ ಮಟ್ಟು (9481760611)

–ಆಡಳಿತ ಮಂಡಳಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಸಿ.ಎಸ್.ರಾಯರ ಆತ್ಮಕಥನ ‘SARVOTHAM’

- Y. Mohan Rao




In his ‘Review’, Dr. Y. Ravindranath Rao, Retd. Principal & Professor of Sociology, Brahmavar (Udupi District) has rightly remarked, “Writing is hard. Editing is harder. Writing an effective blurb is herculean” as the saying goes, is undoubtedly true. To me it was a pleasant experience writing one for the aptly titled autobiography ‘Sarvotham’, written by my good friend Sri C. S.Rao.

A nicely crafted life story, the volume depicts Rao’s personal experiences, true thoughts, contributions, achievements, accomplishments along with the obstacles and challenges he faced as a child, youth, adult, banker, family man, philanthropist, social worker and writer. The three sections of the book i.e., Childhood, Bank career and Life during retirement reflect the varied dimen¬sions of Rao’s personality. It is an honest account and a valuable document of the success story of the author.”

In his ‘Foreword’, P. Pradeep Kumar, Chairman, Karnataka Bank Ltd. says, “ I have had the privilege of knowing C.S. Rao, retired DGM of Corporation Bank for more than three decades. And yet, I do not know enough about him. His autobiography in three parts: his childhood days, his career in Corporation Bank and his post retirement life has given me the chance to know him better. I am therefore delighted to write a foreword to this book.

C.S. Rao, joined Corporation Bank as a clerk in 1969 and retired as a DGM in 2005. It was an eventful career with postings across various parts of India, finally culminating in the Head Office at Mangalore.”

In his ‘Introduction’, C.S. Rao DGM, Corporation Bank, writes, “ The year 2020 will now be remembered as the year of Covid-19, and perhaps the year matters because it changed everybody’s life. Restrictions of movement, keeping distance from others, covering the face with a mask, etc., became an integral part of our lives. It also brought us together by organizing social activities such as helping the needy with food and ration throughout the country. I could also participate in such activities through the Sri Sharada Mantapa, Udupi.

By working hard, I could achieve many business goals and join the prestigious ‘Chairman’s Club’ (typically about the top 4 percent). I have received corporate awards from the hands of Mr M. Narasimhan (he passed away in April 2021) who was the Governor of Reserve Bank of India and subsequently became chairman of the Asia Development Bank. Mr Ramesh, the Governor of Uttar Pradesh State, the TCS chairman and so on. This was possible only because I loved my work. If we work with interest and ownership, it yields better results.”

C.S. Rao’s Autobiography has Three Chapters. 1. Life without a vision 2. Life with a Mission 3. Life after Retirement.

1. Life without a vision : I was born to such a family of humble means to Saraswathi and Srinivasa Rao on 23 October 1946. My first teacher was my appa. He used to take me to his provisions shop and

ENCHANTING FAMILY PHOTO





whenever free, taught me Kannada alphabets and numbers. In 1952, I was admitted to the primary school (first to fifth standard) at Beedinagudde Shale, and made a lot of friends there. After a few years, Beedinagudde Shale closed down and we were shifted to Valakadu Higher Elementary School, which is now a very popular government junior college. After the completion of PUC, I joined the B. Com course in Poorna Prajna College. The commerce block was then in Sanskrit College. For lunch, sometimes I used to go to the Bhojanashale (free meal service) of Krishna Matha as walking back to home and going back to afternoon class felt very tedious. After the degree in 1968, the next mission was job hunting. As I did not know any influential person, I would take suggestions from my friends. They told me to register my name in an employment exchange and apply only to big banks like the State Bank of India, Central Bank of India, Bank of India and Bank of Baroda. These were my childhood days when I was without any object or a vision and without any guidance. With motivation from my ajji and full support of my parents, I could get a degree with great difficulty and joined a small bank to earn a livelihood.

(ಮುಂದಿನ ಸಂಚಿಕೆಯಲ್ಲಿ)

ಸಂಪಾದಕ ಮಂಡಳಿ

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಸುರತ್ಕಲ್ ಕ್ರಿಕೆಟ್ ಪಂದ್ಯಾಕೂಟದಲ್ಲಿ ಕಾಪು ಗೆಳೆಯ ಬಳಗಕ್ಕೆ ಪ್ರಶಸ್ತಿ



ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ಇದರ ಯುವ ವೇದಿಕೆ ವತಿಯಿಂದ 9ನೇ ವರ್ಷದ ಕ್ರಿಕೆಟ್ ಪಂದ್ಯಾಕೂಟವು 26.02.2023ನೇ ಆದಿತ್ಯವಾರ NMPT ಕ್ರೀಡಾಂಗಣದಲ್ಲಿ ನಡೆಸಲಾಯಿತು. ಬೆಳಿಗ್ಗೆ 8.30ಕ್ಕೆ ಕ್ರೀಡಾಕೂಟವು ಆರಂಭವಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಶಶಿಧರ ರಾವ್ ಚಿತ್ರಾಪು ಮತ್ತು ಶ್ರೀ ಜನಕರಾಜ್ ಪಕ್ಷಿಕೆರೆ ಇವರು ಆಗಮಿಸಿದ್ದರು. ರಾಜ್ಯದ ವಿವಿಧ ಕಡೆಗಳಿಂದ ಸುಮಾರು 10 ತಂಡಗಳು ಭಾಗವಹಿಸಿದ್ದವು. ಪ್ರಥಮ ಬಹುಮಾನವನ್ನು ಕಾಪು ಗೆಳೆಯರ ಬಳಗವು ಪಡೆದು, ದ್ವಿತೀಯ ಬಹುಮಾನವನ್ನು J.C.T ಬೆಂಗಳೂರು ತಂಡವು ಪಡೆಯಿತು. ಉತ್ತಮ ದಾಂಡಿಗನಾಗಿ ಸತ್ಯರಾಜ್, ಕಾಪು ಗೆಳೆಯರ ಬಳಗ, ಉತ್ತಮ ಬೌಲರ್ ವಿಕೇಶ್ ರಾವ್, ಕಾಪು ಗೆಳೆಯರ ಬಳಗ ಹಾಗೂ ಅತ್ಯುತ್ತಮ ಸರಣಿ ಆಟಗಾರನಾಗಿ ಅಭಿಜಿತ್ ರಾವ್, J.C.T ಬೆಂಗಳೂರು ಇವರು ಪಡೆದರು.

ಸಂಜೆಯ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಶ್ರೀ ರಾಘವೇಂದ್ರ ರಾವ್ ಅಗರಿ ಮತ್ತು ಶ್ರೀ ಪ್ರವೀಣ ಕುಮಾರ ಅದ್ಯಪಾಡಿ ಇವರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶ್ಯಾನುಭೋಗ್ ಇವರು ವಹಿಸಿದ್ದರು. ಸಭೆಯಲ್ಲಿ ಶ್ರೀ ಗೋಪಾಲಕೃಷ್ಣ ರಾವ್, ಶ್ರೀ ಪಾಲಚಂದ್ರ ಶರ್ಮ ಮತ್ತು ಶ್ರೀ ರಾಘವೇಂದ್ರ ರಾವ್ ಉಪಸ್ಥಿತರಿದ್ದರು. ಮಹಿಳಾವೇದಿಕೆಯ ಕಾರ್ಯದರ್ಶಿಯಾದ ಶ್ರೀಮತಿ ವೀಣಾ ಅರವಿಂದ್ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಕಾರ್ತಿಕ್ ರಾವ್ ಮತ್ತು ಕಾರ್ಯದರ್ಶಿಯಾದ ಶ್ರೀ ಅಶ್ವಿನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಸುಕುಮಾರ್ ಎಂ.ಯು. ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶ್ರೀ ಶೋಧನ್ ಕುಮಾರ್ ಧನ್ಯವಾದವಿತ್ತರು.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ 73ನೇ ವರ್ಧಂತ್ಯುತ್ಸವದ ಸಂದರ್ಭ ಕೋಟೆಕಾರಿನ ಶೃಂಗೇರಿ ಮಠದ ಶಾಖೆಯಲ್ಲಿ ಆಯೋಜಿಸಿದ ಸಮಾರಂಭದಲ್ಲಿ ಕಾಸರಗೋಡಿನ ಪ್ರಸಿದ್ಧ ಜ್ಯೋತಿಷಿ ಹಾಗೂ ಹಲವು ಜ್ಯೋತಿಷ್ಯ ಪುಸ್ತಕಗಳ ಕರ್ತೃ ಶ್ರೀ ಸುಕುಮಾರ ಆಲಂಪಾಡಿಯವರನ್ನು ಜ್ಯೋತಿಷ್ಯ ಕ್ಷೇತ್ರದ ಸಾಧನೆಗಾಗಿ ಶ್ರೀ ಮಠದ ಧರ್ಮಾಧಿಕಾರಿ ಶ್ರೀ ಬೊಳ್ಳಾವ ಸತ್ಯಶಂಕರರ ಉಪಸ್ಥಿತಿಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.



ಶ್ರೀಮತಿ ಸುಂದರಿ ಮತ್ತು ಶ್ರೀ ಟಿ. ಜಗದೀಶ ರಾವ್ ಉಡುಪಿ ಇವರು ತಮ್ಮ ಕುಟುಂಬಸ್ಥರೊಂದಿಗೆ ತಾ.26.03.2023ರಂದು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಚಂಡಿಕಾಹೋಮವನ್ನು ನೆರವೇರಿಸಿದರು.


**ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಪಡುಬಿದ್ರಿ**

ಸ್ವಸ್ತಿ! ಶ್ರೀ ಶೋಭಕೃನ್ನಾಮ ಸಂವತ್ಸರದ ವೈಶಾಖಶುದ್ಧ ಪಂಚಮಿ ದಿನಾಂಕ 25.04.2023ನೇ ಮಂಗಳವಾರ

**ಬ್ರಹ್ಮಕಲಶೋತ್ಸವ ದಿನಾಚರಣೆ ಹಾಗೂ ಶ್ರೀ ಶಂಕರಭಗವತ್ಪಾದಾಚಾರ್ಯ ಜಯಂತಿ ಮಹೋತ್ಸವವು**

ಹಾಗೂ ವೈಶಾಖ ಶುದ್ಧ ಚತುರ್ದಶಿ ದಿನಾಂಕ 04.05.2023 ಗುರುವಾರ

**ಶ್ರೀದೇವರ ವಾರ್ಷಿಕೋತ್ಸವವು**

ಸಂಪನ್ನಗೊಳ್ಳಲಿರುವುದು. ಶ್ರೀಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನೆರವೇರುವ ದೇವತಾ ಕಾರ್ಯಕ್ರಮಗಳಿಗೆ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತನುಮನಧನಗಳಿಂದ ಸಹಕರಿಸಿ ಶ್ರೀದೇವರ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಅಪೇಕ್ಷಿಸುವ

ಆಡಳಿತ ಮಂಡಳಿ ಸದಸ್ಯರು ಮತ್ತು ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ




**ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ 19ನೇ ಸದಸ್ಯ ಸಂಘವಾಗಿ ಬಿಂದು ಮಾಧವ ಸ್ಥಾನಿಕ ಶಿವಬ್ರಾಹ್ಮಣ ಸಂಘವನ್ನು ಮಹಾಮಂಡಲದ ಅಧ್ಯಕ್ಷರು ಶ್ರೀ ಎಂ. ದೇವಾನಂದ ಭಟ್ ಬೆಳ್ವಾಯಿ ಉದ್ಘಾಟಿಸಿದ ಸಂದರ್ಭ.**



ನರಿಂಗಾನದಲ್ಲಿ ಇತ್ತೀಚೆಗೆ ನಡೆದ ಲವಕುಶ ಜೋಡುಕರೆ ಕಂಬಳದಲ್ಲಿ ನಮ್ಮ ಸಮಾಜದವರಾದ ನಂದಳಿಕೆ ಶ್ರೀಕಾಂತ ಭಟ್‌ರವರು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು.

## ಯುಗಾದಿ ಹಬ್ಬದ ಹಾಡುಗಳು


೧. ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.........
ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಳಿ
ಮತ್ತೆ ಕೇಳಿ ಬರುತಿದೆ.........
ಬೇವಿನ ಕಹಿ ಬಾಳಿನಲ್ಲಿ
ಜೇನಿನ ನಸು ಗೆಂಪು ಸೂಸಿ
ಜೀವ ಕಳೆಯ ತರುತಿದೆ........॥೧॥
ವರುಷಕ್ಕೊಂದು ಹೊಸತು ಜನ್ಮ
ವರುಷಕ್ಕೊಂದು ಹೊಸತು ನೆಲೆಯು
ಅಖಿಲ ಜೀವ ಜಾತ ಕ್ಕೈ.........
ಒಂದೇ ಒಂದು ಜನ್ಮದಲ್ಲಿ
ಒಂದೇ ಬಾಲ್ಯ ಒಂದೇ ಹರೆಯು
ನಮಗದಷ್ಟೆ ಏತಕೋ.......॥೨॥
ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ........

೨. ಬಂತು ಯುಗಾದಿಯು ಹರುಷದಲಿ
ತಂತು ಪ್ರಭಾತವು ಬೆಳಗುತಲಿ
ಬೇವಿನಾ ಕಹಿ, ಬೆಲ್ಲದಾ ಸಿಹಿ
ಬಾಳಿನ ಪಯಣದ ಆಟಾ
ಬಂದದೆಲ್ಲಾ ಬರಲೆಂದೂ
ಬದುಕನು ತಿಳಿಸುವ ಪಾಠಾ.....
ಆದಿಯನರಿಯದ ಅಂತ್ಯವ ಕಾಣದ
ಕಾಲ ಚಕ್ರದಾ ಕೂಟಾ....
ಆಗು ಹೋಗುಗಳ ಸಮನಾಗಿ
ಕಾಂಬ ಯುಗಾದಿಯ ಶ್ರೇಷ್ಠಾ...॥ಬಂತು॥

೩. ಗಜಲಿಂಬೆ ಮಾಗಾಯಿ
ಪಾನಕವ ಕುಡಿಯಿರಿ.
ಬೇವ ಸವಿಯಿರಿ.......
ಬಂತು ಬಂತು ಯುಗಾದಿ
ಪರಿಮಳೋದಕ ಚೆಲ್ಲಿ
ಮನೆ ಮನೆಗೆ ನಡೆದಿರಲು
ಮಗ ಮಗಿಸುತಿದೆ ಮೂಗ ತೀಡಿ ತೀಡಿ
ಹೊಸ ಬಟ್ಟೆಗಳ ತೊಟ್ಟು
ಹಣೆಗೆ ಕಸ್ತೂರಿ ಇಟ್ಟು
ಹೊಸ ವರುಷ ಸ್ವಾಗತಿಸು
ಹರುಷದಿಂದ.
ಬಂಗಾರವಾಗಲಿ ಬಾಳ ಮುಸುಕಿದ
ಕಲುಷ,
ಇಂದೆಮ್ಮ ನಿಜಪ್ರೇಮ
ಹರುಷದಿಂದ ॥೧॥
ಈ ಯುಗಾದಿಯ ಬರವು
ಸೊಗದ ಬರವಾಗಲಿ.
ಪ್ರೇಮವೇ ಜೀವನದ ಸ್ವರವಾಗಲಿ.
ಮನೆ ಮನೆಗೆ ಸಾಹಿತ್ಯ
ಪತ್ರ ಪಲಾಕ್ಷೇತ್ರ
ತರುವಂಥ ಪರಶಿವನ ವರವಾಗಲಿ

ಸಂಗ್ರಹ : ಶ್ರೀಮತಿ ಮಣಿಪ್ರಭಾ ಶರ್ಮ


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)






**RAJESH POWER PRESS**

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

## ನಿಧನ



ಸಾವಿರ ಕನಸುಗಳ ಮೊಗ್ಗಿನ ಮನಸಿನ ಮಗು ಹಾರ್ದಿಕ್ ಕುಮಾರ್ (7 ವರ್ಷ) ತಾ.24.03.2023ರಂದು ಶಿವಪಾದ ಸೇರಿರುವುದು ನಮ್ಮ ಸಮಾಜಕ್ಕೆ ಬರಸಿಡಿಲಿನಂತೆ ಎರಗಿದ ಆಘಾತಕಾರಿ ವಿಷಯವಾಗಿರುತ್ತದೆ. ಸ್ನೇಹಮಯಿ ಕುಟುಂಬದ ತಂದೆ ಶ್ರೀ ಪ್ರಮೋದ ಕುಮಾರ್ ಮತ್ತು ತಾಯಿ ಶ್ರೀಮತಿ ಸ್ವಾತಿ, ಅಜ್ಜ ಶ್ರೀ ಹರ್ಷಕುಮಾರ್ ಕೇದಿಗೆ, ಅಜ್ಜಿ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್. ಅಲ್ಲದೇ ಅಪಾರ ಪ್ರೀತಿಪಾತ್ರ ಬಂಧು ವರ್ಗದವರನ್ನು ಅಗಲಿದ್ದಾನೆ.



★★★★ ★★★★

ದಿವಂಗತ ಶ್ರೀ ಹೆಜಮಾಡಿ ಶಿವರಾವ್ ಅವರ ಪತ್ನಿ ಶ್ರೀಮತಿ ಮನೋರಮಾ ಅವರು ತಮ್ಮ 93ನೇ ವಯಸ್ಸಿನಲ್ಲಿ ತಾ.16.03.2023 ರಂದು ಕುಲಶೇಖರ ಮಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.



★★★★ ★★★★

ಶ್ರೀ ನಡ್ಸಾಲ್ ಎಸ್. ಪ್ರಶಾಂತ್ (ದಿ। ಶ್ರೀ ನಡ್ಸಾಲ್ ಶಿವರಾವ್ ಮತ್ತು ದಿ। ಶ್ರೀಮತಿ ರಮಾದೇವಿ-ಪಡುಬಿದ್ರಿ ಕುಟುಂಬ ಅವರ ಪುತ್ರ) ಅವರು ತಮ್ಮ 57ನೇ ವಯಸ್ಸಿನಲ್ಲಿ ತಾ.19.03.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.




★★★★ ★★★★

ಕದ್ರಿ ದಿ। ವೆಂಕಟರಮಣ ರಾವ್‌ರವರ ಪತ್ನಿ ಗುಲಾಬಿ ವಿ. ರಾವ್ (ದಿ। ಶ್ರೀ ಎಲ್ಲೂರು ರಾಮಕೃಷ್ಣಯ್ಯ ಮತ್ತು ದಿ। ಶ್ರೀಮತಿ ನಾಗವೇಣಿ ಇವರ ಮಗಳು) ಅವರು ತಮ್ಮ 84ನೇ ವಯಸ್ಸಿನಲ್ಲಿ ತಾ.20.03.2023 ಬೆಂಗಳೂರಿನಲ್ಲಿ ನಿಧನರಾದರು. ಅವರು ಮೂವರು ಪುತ್ರರು, ಒಬ್ಬ ಮಗಳನ್ನು ಅಗಲಿದ್ದಾರೆ.



★★★★ ★★★★

ದಿ। ಶಂಕರ್ ಪಲ್ಲಿಗುಡ್ಡೆ (ಬಾಬು) ಅವರ ಪತ್ನಿ ಶ್ರೀಮತಿ ಉಮಾ ಶಂಕರ್ ಪಲ್ಲಿಗುಡ್ಡೆ ಅವರು ತಮ್ಮ 72ನೇ ವಯಸ್ಸಿನಲ್ಲಿ ತಾ.22.03.2023 ರಂದು ಹುಬ್ಬಳ್ಳಿಯಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.



★★★★ ★★★★

ದಿ। ಶ್ರೀ ಉಡುಪಿ ಸೀತಾರಾಮಯ್ಯ ಮತ್ತು ದಿ। ಶ್ರೀಮತಿ ಚಂದ್ರಮ್ಮ ಅವರ ಪುತ್ರ ಶ್ರೀ ಯು.ಆರ್.ರಾವ್ (ಉಡುಪಿ ರವೀಂದ್ರ ರಾವ್) ಅವರು ತಮ್ಮ 80ನೇ ವಯಸ್ಸಿನಲ್ಲಿ ತಾ.02.04.2023 ರಂದು ಅಂಧೇರಿ ಮುಂಬೈನಲ್ಲಿ ನಿಧನರಾದರು. ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.



★★★★ ★★★★

ದಿ। ಡಾ। ಶ್ರೀ ಶ್ರೀಧರ್ ವಿ. ಧಾರೇಶ್ವರ್ ಅವರ ಪತ್ನಿ ಶ್ರೀಮತಿ ಮಾಲತಿ ಧಾರೇಶ್ವರ್ ಅವರು ತಮ್ಮ 88ನೇ ವಯಸ್ಸಿನಲ್ಲಿ ತಾ.03.04.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಒಬ್ಬ ಮಗನನ್ನು ಅಗಲಿದ್ದಾರೆ.



★★★★ ★★★★

ದಿ। ಶ್ರೀ ನಟ್ಟೋಜಿ ಶೇರಾ ವಿಷ್ಣು ರಾವ್ ಅವರ ಪತ್ನಿ ಶ್ರೀಮತಿ ಶಾಂಭವಿ ಅವರು ತಮ್ಮ 88ನೇ ವಯಸ್ಸಿನಲ್ಲಿ ತಾ.07.04.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.



★★★★ ★★★★

ದಿ। ಶ್ರೀ ನಂದಳಿಕೆ ರಘುರಾಮ್ ರಾವ್ ಮತ್ತು ದಿ। ಶ್ರೀಮತಿ ಲಲಿತಾ ರಾವ್ ಅವರ ಪುತ್ರ ಡಾ। ಶ್ರೀ ನಿರಂಜನ್ ರಾವ್ ಅವರು ತಮ್ಮ 69ನೇ ವಯಸ್ಸಿನಲ್ಲಿ ತಾ.08.04.2023 ರಂದು ಬೆಳಿಗ್ಗೆ ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರಿಯನ್ನು ಅಗಲಿದ್ದಾರೆ.



★★★★ ★★★★

ಶ್ರೀ ನಟ್ಟೋಜಿ ಶೇರಾ ಗೋಪಾಲ್ ವಿಟ್ಟಲ್ ರಾವ್ ಅವರು ತಮ್ಮ 86ನೇ ವಯಸ್ಸಿನಲ್ಲಿ ತಾ.09.04.2023 ರಂದು ಮುಂಬೈನಲ್ಲಿ ನಿಧನರಾದರು. ಅವರು ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.



★★★★ ★★★★

ದಿ। ಶ್ರೀ ರಾಮರಾವ್ ಅವರ ಪತ್ನಿ ಶ್ರೀಮತಿ ಸರಸ್ವತಿ ಅವರು ತಮ್ಮ 93ನೇ ವಯಸ್ಸಿನಲ್ಲಿ ತಾ.18.03.2023ರಂದು ಪಲಿಮಾರ್‌ನ ರಾಮ ನಿವಾಸದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.



★★★★ ★★★★

ಶ್ರೀ ಪಡುಬೆಳ್ಳೆ ಶ್ರೀನಿವಾಸ ರಾವ್ ಅವರ ಪತ್ನಿ ಶ್ರೀಮತಿ ಸುಶೀಲಮ್ಮ ಅವರು ತಮ್ಮ 101ನೇ ವಯಸ್ಸಿನಲ್ಲಿ ತಾ.09.04.2023 ರಂದು ನಿಧನರಾದರು. ಶತಾಯುಷಿಯಾದ ಇವರು ಎಂಟು ಪುತ್ರರು, ಐದು ಪುತ್ರಿಯರು, ಮೊಮ್ಮಕ್ಕಳು ಮತ್ತು ಮರಿಮಕ್ಕಳನ್ನು ಅಗಲಿದ್ದಾರೆ.

*With Best Complimemts From*

SRI M. SHAILESH RAO
B.E., Civil
Ph : 9448624324

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.
**Website : shreemaalavikaassociates.com**

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.08-05-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.09-05-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.25-04-2023 ಮತ್ತು ತಾ.10-05-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮೇಷ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.04.2023 | ಮೇಷ ಸಂಕ್ರಮಣ | 25.04.2023 | ಶ್ರೀ ಶಂಕರ ಜಯಂತಿ |
| 15.04.2023 | ಸೌರಯುಗಾದಿ, ಸೌರ ಶೋಭಕೃತ್ ಸಂವತ್ಸರದ ಆರಂಭ | 01.05.2023 | ಸರ್ವೈಕಾದಶಿ |
| | | 05.05.2023 | ಹುಣ್ಣಿಮೆ |
| 16.04.2023 | ಸರ್ವೈಕಾದಶಿ | 06.05.2023 | ವಸಂತ ಋತು ವೈಶಾಖ ಮಾಸದ ಕೃಷ್ಣ ಪಕ್ಷಾರಂಭ |
| 20.04.2023 | ಅಮಾವಾಸ್ಯೆ | 08.05.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.33 |
| 21.04.2023 | ವಸಂತ ಋತು ವೈಶಾಖ ಮಾಸದ ಶುಕ್ಲ ಪಕ್ಷಾರಂಭ | 15.05.2023 | ವೃಷಭ ಸಂಕ್ರಮಣ, ಸರ್ವೈಕಾದಶಿ |
| 22.04.2023 | ಅಕ್ಷಯ ತದಿಗೆ | 19.05.2023 | ಅಮಾವಾಸ್ಯೆ |

### ಬ್ರಹ್ಮೋಪದೇಶ

**ಚಿ। ಚಿರಾಗ್ ರಾವ್**

ಶ್ರೀಮತಿ ಅನಸೂಯಾ ಹಾಗೂ ಶ್ರೀ ಮಧುಸೂಧನರಾವ್‌ರವರ ಪುತ್ರ **ಚಿ। ಚಿರಾಗ್ ರಾವ್**‌ನ ಬ್ರಹ್ಮೋಪದೇಶವು ತಾ.23.03.2023 ರಂದು ಪಡುಬೆಳ್ಳೆ ಪಾಜಕ ಕ್ಷೇತ್ರದ ವ್ಯಾಸಮಧ್ವಸಭಾಂಗಣದಲ್ಲಿ ಜರಗಿತು.

**ಚಿ। ಧ್ಯಾನ**

ಶ್ರೀಮತಿ ಸವಿತಾ ಮತ್ತು ಡಾ। ಕೃಷ್ಣಪ್ರಸಾದರವರ ಪುತ್ರ, ಪೆರುವಾಜೆ ರಾಮಕೃಷ್ಣರವರ ಪೌತ್ರ **ಚಿ। ಧ್ಯಾನ**ನ ಬ್ರಹ್ಮೋಪದೇಶವು ತಾ.30.03.2023ರಂದು ಉಡುಪಿ ಕಿನ್ನಿಮುಲ್ಕಿಯ "ಶ್ರೀ ದೇವಿ ಸಭಾಭವನ"ದಲ್ಲಿ ಜರಗಿತು.


PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



ಕೆ. ದಿನಮಣಿ ಶಾಸ್ತ್ರೀ
ಮೊಬೈಲ್ : 8277190632
9482284970



ಚಿತ್ತಾರ ಫೋಟೋ ಆರ್ಟ್
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ-576213.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



## ಸಾಧಕರಿಗೆ ಅಭಿನಂದನೆಗಳು



### ಕು| ಆರುಷಿ

ಉಡುಪಿಯ ಸಿಎ ಗಣೇಶ್ ಹೆಬ್ಬಾರ್ ಮತ್ತು ಆರತಿ ಹೆಬ್ಬಾರ್‌ರವರ ಪುತ್ರಿ ಕು| ಆರುಷಿ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ 92.5% (370/400, ಡಿಸ್ಟಿಂಕ್ಷನ್) ಗಳಿಸಿದ್ದಾರೆ. ಇವರು ವಿದುಷಿ ಲಕ್ಷ್ಮೀ ಗುರುರಾಜ್ (ನೃತ್ಯನಿಕೇತನ, ಉಡುಪಿ) ರವರ ವಿದ್ಯಾರ್ಥಿನಿಯಾಗಿದ್ದಾರೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.



### ಕು| ಅನುಜ್ಞಾ ಎಸ್. ಮಾರ್ಪಳ್ಳಿ

ಶ್ರೀ ಮಾರ್ಪಳ್ಳಿ ಎಸ್. ಸತೀಶ್ ಕುಮಾರ್ ಮತ್ತು ಶ್ರೀಮತಿ ಲಕ್ಷ್ಮೀ ಅವರ ಪುತ್ರಿ ಕುಮಾರಿ ಅನುಜ್ಞಾ ಎಸ್. ಮಾರ್ಪಳ್ಳಿ (6ನೇ ದರ್ಜೆ) ಕರ್ನಾಟಕ ಸಂಗೀತ ಜೂನಿಯರ್ ಗ್ರೇಡ್ ಗಾಯನದಲ್ಲಿ ಡಿಸ್ಟಿಂಕ್ಷನ್ ಗಳಿಸಿದ್ದಾರೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು| ಪ್ರಣತಿ



ಶ್ರೀ ಅಶೋಕ್ ರಾವ್ ಮತ್ತು ಶ್ರೀಮತಿ ವಿಂದ್ಯಾ ದಂಪತಿಯ ಪುತ್ರಿ, ಶ್ರೀಮತಿ ವನಜಾಕ್ಷಿ ಬೈಲೂರು ಅವರ ಮೊಮ್ಮಗಳು ಹಾಗೂ ಶ್ರೀ ರಾಮಚಂದ್ರ ಮತ್ತು ಶ್ರೀಮತಿ ಲಕ್ಷ್ಮೀ ಶ್ರೀರಂಗಪಟ್ಟಣ ಇವರ ಮೊಮ್ಮಗಳಾದ ಕು.ಪ್ರಣತಿ ಬೈಲೂರು ಇವಳು ಭರತನಾಟ್ಯ ಜೂನಿಯರ್ ಗ್ರೇಡ್‌ನಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು| ಪ್ರಣಮ್ಯ



ಶ್ರೀ ಸತ್ಯಪ್ರಶಾಂತ್ ಮತ್ತು ಶ್ರೀಮತಿ ಸೌಜನ್ಯ ಅವರ ಪುತ್ರಿ, ಶ್ರೀ ಸುರೇಶ್ ಬಾಬು ಹಾಗೂ ಶ್ರೀಮತಿ ವಿಜಯಲಕ್ಷ್ಮಿ ಅವರ ಮೊಮ್ಮಗಳು ಮತ್ತು ಶ್ರೀ ರಾಮಚಂದ್ರ ಜೋಯಿಸ ಹಾಗೂ ಶ್ರೀಮತಿ ಶ್ರೀದೇವಿ ಸುಳ್ಯರವರ ಮೊಮ್ಮಗಳಾದ ಕುಮಾರಿ ಪ್ರಣಮ್ಯ ಇವಳು ಕರ್ನಾಟಕ ಸಂಗೀತ ಜೂನಿಯರ್ ಗ್ರೇಡ್ ವಯಲಿನ್ ಮತ್ತು ಗಾಯನದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾಳೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು| ಅನ್ವಿತಾ ರಾವ್



ಶ್ರೀ ಸಂತೋಷ್ ರಾವ್ ಕಡಬ ಮತ್ತು ಸರಿತಾ ಎಸ್. ರಾವ್ ಅವರ ಪುತ್ರಿ ಕುಮಾರಿ ಅನ್ವಿತಾ ರಾವ್ ಅವರು ಭರತ ನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದಿದ್ದಾರೆ. ಅವರು ವಿದುಷಿ ಶಮ್ಯ ಕೃಷ್ಣ (ತಸ್ಯ ಆರ್ಟ್ಸ್, ಬೆಂಗಳೂರು) ಅವರ ವಿದ್ಯಾರ್ಥಿನಿಯಾಗಿದ್ದಾರೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು| ಪ್ರಣವಿ



ಅರುಣ್ ಕುಮಾರ್ ತಾರಾನಾಥ ಮತ್ತು ರಮ್ಯಾ ಅರುಣ್ ಕುಮಾರ್ ಅವರ ಪುತ್ರಿ ಕುಮಾರಿ ಪ್ರಣವಿ ಅರುಣ್ ಕುಮಾರ್ ಅವರು ಭರತ ನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದಿದ್ದಾರೆ. ಅವರು ವಿದುಷಿ ವಂದ್ಯ ಶ್ರೀನಾಥ್ (ಭ್ರಮರಾ ಸಂಗೀತ ಮತ್ತು ನೃತ್ಯ ಶಾಲೆ, ಬೆಂಗಳೂರು) ಅವರ ವಿದ್ಯಾರ್ಥಿನಿ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು| ಕವನ



ಮೂಲತಃ ಎಲ್ಲೂರಿನವರಾದ ಹಾಗೂ ಸದ್ಯ ಉದ್ಯೋಗ ನಿಮಿತ್ತ ಚೆನ್ನೈನಲ್ಲಿರುವ ಪ್ರವೀಣ್ ಕುಮಾರ್ ಹಾಗೂ ಗಾಯತ್ರಿ ದಂಪತಿಯ ಪುತ್ರಿ ಕುಮಾರಿ ಕವನ ಅವರಿಗೆ ತಾನು ಕಲಿತ ಸಾಯಿರಾಮ್ ಇಂಜಿನಿಯರಿಂಗ್ ಕಾಲೇಜಿನಲ್ಲಿ '2023ರ ಅತ್ಯುತ್ತಮ ವಿದ್ಯಾರ್ಥಿ' ಗೌರವ ಸಿಕ್ಕಿದೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.



### ಡಾ| ಮಾನಸ ಪಿ. ರಾವ್

ಶ್ರೀ ಪ್ರವೀಣ್ ರಾವ್ ಮತ್ತು ಶ್ರೀಮತಿ ಕವಿತಾ ಅವರ ಪುತ್ರಿ ಡಾ| ಮಾನಸ ಪಿ. ರಾವ್ ಅವರು ಅಂತಿಮ ಎಂ.ಬಿ.ಬಿ.ಎಸ್.ನಲ್ಲಿ 2ನೇ ರ‍್ಯಾಂಕ್ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಒಟ್ಟಾರೆ 2ನೇ ಬ್ಯಾಚ್ ಟಾಪರ್‌ಗಳಿಸಿದ್ದಾರೆ. ಅವರು ತಮ್ಮ ಎಂ.ಬಿ.ಬಿ.ಎಸ್ ಅವಧಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಒಟ್ಟು ಹನ್ನೊಂದು ರ‍್ಯಾಂಕ್‌ಗಳನ್ನು ಗಳಿಸಿದ್ದಾರೆ. ಇವರು ಮಂಗಳೂರಿನ ಎ.ಜೆ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ವಿದ್ಯಾರ್ಥಿನಿಯಾಗಿದ್ದಾರೆ. ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಪ್ರವೀಣ್ ಕುಮಾರ್ ನಂದಳಿಕೆ ಇವರಿಗೆ ಗೌರವ ಸನ್ಮಾನ






ಇತ್ತೀಚೆಗೆ ಉಡುಪಿ ಮಾರ್ಪಳ್ಳಿ ಮಹಾಲಿಂಗೇಶ್ವರ ಯಕ್ಷಗಾನ ಕಲಾಮಂಡಳಿಯ 37ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ದಿ| ಪಾಡಿಗಾರು ಗೋಪಾಲಕೃಷ್ಣ ಉಪಾಧ್ಯ ಸ್ಮರಣಾರ್ಥ ಕೊಡಮಾಡಲ್ಪಟ್ಟ ಪ್ರಶಸ್ತಿಗೆ ಹವ್ಯಾಸಿ ಯುವ ಭಾಗವತ, ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕರೂ, ಉಡುಪಿ ಮುದ್ರಕರ ಸೊಸೈಟಿಯ ಕಾರ್ಯದರ್ಶಿಗಳಾದ ಉಡುಪಿ ಕುಕ್ಕಿಕಟ್ಟೆ ನಿವಾಸಿ ಪ್ರವೀಣ್ ಕುಮಾರ್ ನಂದಳಿಕೆ ಇವರಿಗೆ ನೀಡಿ ಗೌರವಿಸಲಾಯಿತು. ಹಲವಾರು ಸಂಘ ಸಂಸ್ಥೆಗಳಲ್ಲಿ ಹಾಗೂ ನಮ್ಮ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನದಲ್ಲಿಯೂ ಭಾಗವತರಾಗಿ ತಮ್ಮ ಸುಶ್ರಾವ್ಯ ಕಂಠದ ಮೂಲಕ ಮನೆ ಮಾತಾಗಿರುವ ಇವರು ಹಲವಾರು ಪ್ರಶಸ್ತಿಗಳನ್ನು ಪಡೆದಿರುವುದು ನಮ್ಮ ಸಮಾಜಕ್ಕೆ ಗೌರವ ತಂದಿದೆ.

## ಶತದಳಪದ್ಮ ಲೋಕಾರ್ಪಣೆ



ಬೆಳ್ತಂಗಡಿಯಲ್ಲಿ ಜರಗಿದ ವಿಶ್ವ ಸ್ಥಾನಿಕ ಸಮ್ಮೇಳನದಲ್ಲಿ ವಿಜಯಲಕ್ಷ್ಮೀ ನಂದಳಿಕೆ ಹಾಗೂ ಸೌಜನ್ಯ ನಂದಳಿಕೆ ಸಂಪಾದಿಸಿರುವ ಶತಮಾನ ಸಂಭ್ರಮದಲ್ಲಿರುವ ಹರಿಕಥೆಯ ದಂತಕಥೆ ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಅವರ ಸಂಸ್ಮರಣಾ ಗ್ರಂಥ 'ಶತದಳಪದ್ಮ' ವನ್ನು ಶ್ರೀ ಕ್ಷೇತ್ರ ಹೊರನಾಡಿನ ಧರ್ಮದರ್ಶಿ ಭೀಮೇಶ್ವರ ಜೋಷಿಯವರು ಲೋಕಾರ್ಪಣೆಗೊಳಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆಯವರು ಆಶೀರ್ವದಿಸಿದರು. ಕರ್ನಾಟಕ ಬ್ಯಾಂಕ್ ಅಧ್ಯಕ್ಷರಾದ ಪ್ರದೀಪ್ ಕುಮಾರ್ ಪಂಜ ಅವರು ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್, ಸರ್ವಾಧ್ಯಕ್ಷ ರಾಧಾಕೃಷ್ಣ ರಾವ್, ಎನ್.ಕೆ. ಜಗನ್ನಿವಾಸ ರಾವ್, ಬಿ.ಕೆ. ಧನಂಜಯರಾವ್, ಪಿ.ಲಕ್ಷ್ಮೀನಾರಾಯಣ ಬೆಳುವಾಯಿ, ದೇವಾನಂದ ಭಟ್, ಅರುಣ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.



ಉಡುಪಿಯ ಡಾ| ಪಿ.ಜಿ.ರಾವ್ ಅವರಿಗೆ ವಿಶ್ವ ಸ್ಥಾನಿಕ ಸಮಾವೇಶದಲ್ಲಿ ಅವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು.




ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಸದಸ್ಯರಾಗಿ ಪಿ.ಪ್ರಭಾಕರ ಭಂಡಿ ಹಾಗೂ ಪಿ. ಸಂದೀಪ್ ರಾವ್ ಚಿಟ್ಪಾಡಿ ಇವರನ್ನು ತಾ.05.03.2023ರಂದು ಬೆಳ್ತಂಗಡಿ ಸ್ಥಾನಿಕ ಸಮಾವೇಶದಲ್ಲಿ ಗುರುತಿಸಿ ಗೌರವಿಸಲಾಯಿತು.

**ಪ್ರಸಕ್ತ ಸಾಲಿನ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಸದಸ್ಯರಾಗಿ ಸೇರ್ಪಡೆಗೊಂಡವರು :** ಫಿಲಿಪ್ಸ್‌ನ ಮಾರ್ಕೆಟಿಂಗ್‌ನ ಎಕ್ಸಿಕ್ಯೂಟಿವ್ ಪಿ. ಸಂದೀಪ್ ರಾವ್ ದುಬೈ ಯು.ಎ.ಇ., ಸಿ.ಎ. ತಂತ್ರಾಡಿ ರಾಮಚಂದ್ರ ಶಾನುಭಾಗ, ಕೆನರಾ ಬ್ಯಾಂಕ್ ನಿವೃತ್ತ ಮುಖ್ಯ ವ್ಯವಸ್ಥಾಪಕರು ಬೈಲಕೆರೆ ಗೋವಿಂದ್ ರಾವ್, ಜನಪ್ರಿಯ ವೈದ್ಯ ಡಾ ಪಿ.ಜಿ.ರಾವ್ ಮುಂಬೈ, ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇದರ ಕಾರ್ಯದರ್ಶಿ ಪ್ರಭಾಕರ ಭಂಡಿ, ಕಾರ್ಪೊರೇಷನ್ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕರು ಹಾಗೂ ಕ್ಯುರೇಟರ್ ಕಾರ್ಪ್ ಬ್ಯಾಂಕ್ ಮ್ಯೂಸಿಯಂ ಉಡುಪಿಯ ಎಂ. ಜಯ ಪ್ರಕಾಶ್ ರಾವ್

# ಶ್ರೀ ಸಿ.ಎಸ್. ರಾವ್‌ರವರಿಗೆ "ಸ್ಥಾನಿಕ ರತ್ನ" ಪ್ರಶಸ್ತಿ



ಶ್ರೀ ಸಿ.ಎಸ್. ರಾವ್ (ಚಿಟ್ಪಾಡಿ ಸರ್ವೋತ್ತಮರಾವ್) ಇವರಿಗೆ ಬೆಳ್ತಂಗಡಿಯಲ್ಲಿ ನಡೆದ ವಿಶ್ವಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ "ಸ್ಥಾನಿಕ ರತ್ನ" ಪ್ರಶಸ್ತಿಯನ್ನು ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ತೀರ್ಥ ಸ್ವಾಮೀಜಿಯವರಿಂದ ನೀಡಲಾಯಿತು. ಸಿ.ಎಸ್. ರಾಯರು ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯಲ್ಲಿ 3 ಅವಧಿಗೆ ಅಧ್ಯಕ್ಷರಾಗಿದ್ದು ಹಲವಾರು ಕೆಲಸ ಕಾರ್ಯಗಳನ್ನು ನಡೆಸಿದ್ದಾರೆ. ಶಾರದಾ ಮಂದಿರಕ್ಕೆ ದ್ವಾರ, ಇಂಟರ್ಲಾಕ್, ಜ್ಞಾನ ಮಂದಿರ ನವೀಕರಣ ಹಾಗೂ ಮೊದಲ ಬಾರಿಗೆ ಶಾರದಾ ಮಂಟಪವನ್ನು ಹೊಸ ಆಕಾರದೊಂದಿಗೆ ನವೀಕರಿಸಿದ್ದರು. ಶಾರದಾ ಮಂಟಪಕ್ಕೆ ನಗರ ಸಭೆಯಿಂದ 'ಶಾರದಾ ನಗರ' ಎಂದು ಹೆಸರಿಸಲು ಕಾರಣಕರ್ತರಾಗಿದ್ದಾರೆ. ಈಗಲೂ ಉಡುಪಿ ಸಂಘದಲ್ಲಿ ಸಕ್ರಿಯರಾಗಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ ಸಂಘದಲ್ಲಿಯೂ ಸದಸ್ಯತ್ವ ಅಭಿಯಾನ, ಬಿಲ್ಡಿಂಗ್ ಕಮಿಟಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮಂಗಳೂರು ಸುಬ್ರಹ್ಮಣ್ಯ ಸಭೆಯಲ್ಲಿ ಉಪಾಧ್ಯಕ್ಷರಾಗಿದ್ದು, 3 ವರ್ಷಗಳ ಕಾಲ ಅಧ್ಯಕ್ಷರಾಗಿದ್ದು ಶತಮಾನೋತ್ಸವ ಸಂದರ್ಭದಲ್ಲಿ ಹಣಕಾಸು ಕ್ರೋಢೀಕರಿಸಲು ಕೈಜೋಡಿಸಿದ್ದಾರೆ. ಮಹಾ ಮಂಡಲದ ಸ್ಥಾಪಕ ಅಧ್ಯಕ್ಷರಾಗಿದ್ದು ಸದಸ್ಯತ್ವ ಅಭಿಯಾನ ಹಾಗೂ ಸಂಘಗಳ ನೋಂದಾವಣೆ ಕಾರ್ಯಕ್ರಮಗಳಲ್ಲಿ ಸಹಕರಿಸುತ್ತಿದ್ದಾರೆ. ನಮ್ಮ ಸಂಘದ ಪೂರ್ವಾಧ್ಯಕ್ಷರಾದ ಪಾಲಚಂದ್ರ ರಾಯರು ಸಿ.ಎಸ್.ರಾಯರಿಗೆ ಸ್ಥಾನಿಕ ರತ್ನ ನೀಡಿರುವುದು ಸಮರ್ಪಕವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಿ.ಎಸ್.ರಾಯರು ಸ್ನಾತಕೋತ್ತರ ಪದವೀಧರರಾಗಿದ್ದು ತಮ್ಮ ವೃತ್ತಿ ಜೀವನದಲ್ಲಿ ಇಂಡಿಯನ್ ಇನ್ಸ್ಟ್ಯೂಟ್ ಮ್ಯಾನೇಜ್‌ಮೆಂಟ್ ಅಹಮದಾಬಾದ್, ಇಂಡಿಯನ್ ಇನ್ಸ್ಟ್ಯೂಟ್ ಆಫ್ ಮೆನೇಜ್‌ಮೆಂಟ್ ಬೆಂಗಳೂರು, ನ್ಯಾಶನಲ್ ಇನ್ಸ್ಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್‌ಮೆಂಟ್ ಮುಂಬೈ ಮುಂತಾದ ಹಲವಾರು ಸಂಸ್ಥೆಗಳಿಂದ ತರಬೇತಿಯನ್ನು ಪಡೆದಿರುತ್ತಾರೆ. ಕಾರ್ಪೋರೇಷನ್ ಬ್ಯಾಂಕಿನ ಹಲವು ಹುದ್ದೆಗಳನ್ನು ನಿರ್ವಹಿಸಿ ಡಿ.ಜಿ.ಎಂ. ಆಗಿ ನಿವೃತ್ತರಾಗಿದ್ದಾರೆ. ಗುಜರಾತ್, ಗೋವಾ, ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಸೇವೆಸಲ್ಲಿಸಿದ್ದ ಇವರು ಗೋವಾ ಮುಖ್ಯಮಂತ್ರಿಯಿಂದ ಉತ್ತಮ ಬ್ಯಾಂಕರ್ ಪ್ರಶಸ್ತಿಯನ್ನು ಪಡೆದಿರುವುದು ಇವರ ಸಾಧನೆಯಾಗಿದೆ. ನಿವೃತ್ತರಾದ ಬಳಿಕ ಅಖಿಲ ಭಾರತ ಕಾರ್ಪೋರೇಷನ್ ಬ್ಯಾಂಕ್‌ನ ನಿವೃತ್ತ ಅಧಿಕಾರಿಗಳ ಸಂಘದ ಉಪಾಧ್ಯಕ್ಷರಾಗಿದ್ದರು. ವಿಶ್ರಾಂತ ಜೀವನದಲ್ಲಿ ಫಸ್ಟ್‌ಮ್ಯಾನೇಜ್‌ಮೆಂಟ್‌ಗುರು ಆದಿಶಂಕರಾಚಾರ್ಯ, ವೇದಗಣಿತದ ಪರಿಚಯ, ಅಮೇರಿಕಾ-ಅಮೇರಿಕಾ, ತುಳುನಾಡಿನಲ್ಲಿ ಬ್ರಾಹ್ಮಣ್ಯ, ಸರ್ವೋತ್ತಮ್ ಹೀಗೆ 5 ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಉಡುಪಿ ಹಿರಿಯ ನಾಗರಿಕ ಸಂಘದ ಅಧ್ಯಕ್ಷರಾಗಿ ಹಲವು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾರೆ. ಉಡುಪಿ ಬ್ರಹ್ಮಗಿರಿ ಲಯನ್ ಅಧ್ಯಕ್ಷರಾಗಿ 4 ಕಂದಾಯ ಜಿಲ್ಲೆಗಳ 84 ಕ್ಲಬ್‌ಗಳಲ್ಲಿ ಜಿಲ್ಲೆಯ ಅತ್ಯುತ್ತಮ ಕ್ಲಬ್ ಪ್ರಶಸ್ತಿ ಪಡೆದಿದ್ದಾರೆ. 'ಸ್ಥಾನಿಕ ರತ್ನ' ಪ್ರಶಸ್ತಿ ಲಭಿಸಿರುವ ಈ ಸಂದರ್ಭದಲ್ಲಿ ಅವರಿಗೆ ಶ್ರೀ ಶಾರದಾ ಅಭಿನಂದನೆಗಳು.


## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ-576102.
ಫೋನ್ : 8971185844, 0820-2958444



ಸಮಾಜ ಬಾಂಧವರೇ,

ನಮ್ಮ ಸಮಾಜ ಬಾಂಧವರ ಹಾಗೂ ಗ್ರಾಹಕರ ಬೇಡಿಕೆಯಂತೆ ಶ್ರೀ ಶಾರದಾ ಮಂಟಪದ ಮುಖ್ಯ ಸಭಾಂಗಣವನ್ನು ನವೀಕರಿಸಿ, ಹವಾನಿಯಂತ್ರಿತ(AC)ವಾಗಿ ಪರಿವರ್ತಿಸಿ ಸುಸಜ್ಜಿತಗೊಳಿಸುತ್ತಿದ್ದು, ಅಂದಾಜು ವೆಚ್ಚ ರೂ.98 ಲಕ್ಷ ಬೇಕಾಗಿರುತ್ತದೆ. ಅದಕ್ಕಾಗಿ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಣಗೊಳಿಸುತ್ತಿದ್ದು ಸಮಾಜ ಬಾಂಧವರಿಂದ ದೇಣಿಗೆ ಹಾಗೂ ಬಡ್ಡಿ ರಹಿತ ಸಾಲವನ್ನು ಸಂಗ್ರಹಿಸುತ್ತಿದ್ದೇವೆ. ಸಂಘದ ಮಹಾಸಭೆಯ ನಿರ್ಣಯದಂತೆ ಲಿಖಿತ ಒಪ್ಪಂದದ ಮೇರೆಗೆ ಬಡ್ಡಿರಹಿತ ಸಾಲವನ್ನು ಪಡೆದು ನಿರ್ದಿಷ್ಟ ಸಮಯದಲ್ಲಿ ಮರುಪಾವತಿಯನ್ನು ಮಾಡಲಿದ್ದೇವೆ. ಸಮಾಜಬಾಂಧವರ ಸಕಾರಾತ್ಮಕ ಸ್ಪಂದನೆಯನ್ನು ನಿರೀಕ್ಷಿಸುತ್ತೇವೆ.

ನಿಮ್ಮ ಅಮೂಲ್ಯ ಧನ ಸಹಾಯವನ್ನು ಕ್ಯೂಆರ್ ಕೋಡ್/ಚೆಕ್/ಖಾತೆಗೆ ನೇರ ಜಮೆ/ನಗದು ರೂಪದಲ್ಲಿ ನೀಡಬಹುದಾಗಿದೆ.

Account Name : Shree Sthanika Brahmana Sangha (R.)
SB A/c No. : SB A/C No. 80325001028816O1
Bank Address : Karnataka Bank, Kunjibettu Udupi
IFSC : IFSC Code : KARB0000803

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಕೆ. ಮಂಜುನಾಥ ಹೆಬ್ಬಾರ್, ಅಧ್ಯಕ್ಷರು (9611099894)
ಪಿ. ಪ್ರಭಾಕರ ಭಂಡಿ, ಕಾರ್ಯದರ್ಶಿ (9449254846)
CA ಗಣೇಶ್ ಹೆಬ್ಬಾರ್ ಕೆ., ಕೋಶಾಧಿಕಾರಿ (9845992859)



## ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ

ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ, ಶೃಂಗೇರಿ
**ಕೋಟೆಕಾರು ಶಾಖೆ, ಮಂಗಳೂರು – 575 022, ದಕ್ಷಿಣಕನ್ನಡ ಜಿಲ್ಲೆ**

ಶ್ರೀ ಶೋಭಕೃನ್ನಾಮ ಸಂವತ್ಸರದ ವೈಶಾಖ ಶುಕ್ಲ ತೃತೀಯ ತಾ.23.04.2023ನೇ ಭಾನುವಾರದಿಂದ ಪಂಚಮಿ ದಿನಾಂಕ 25.04.2023ನೇ ಮಂಗಳವಾರದವರೆಗೆ

**ಕೋಟೆಕಾರಿನಲ್ಲಿರುವ ಶ್ರೀ ಶೃಂಗೇರಿ ಶಂಕರಮಠದಲ್ಲಿ**

## ಶ್ರೀ ಶಂಕರ ಜಯಂತ್ಯುತ್ಸವವು

ಜರುಗಲಿರುವುದು. ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೇಯೋವಂತರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಗುರು ಸೇವಾಧುರೀಣ, ಪದ್ಮಶ್ರೀ ಪುರಸ್ಕೃತ**
**ಡಾ। ವಿ.ಆರ್. ಗೌರೀ ಶಂಕರ**
ಶ್ರೀ ಮಠದ ಸಿ.ಇ.ಒ. ಮತ್ತು ಆಡಳಿತಾಧಿಕಾರಿಗಳು

**ಬೊಳ್ವಾವ ಸತ್ಯ ಶಂಕರ**
ಧರ್ಮಾಧಿಕಾರಿಗಳು





*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

## JALAJA SKIN CLINIC


1ST FLOOR, SAI HARSHA SQUARE, KOLADAPETE (THENKAPETE), OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.



**With Best Compliments From :**

BUILDING DREAMS, ENHANCING LIVES.









Land Trades
BUILDERS & DEVELOPERS
BUILDING TRUST, DELIVERING VALUE

NAKSHATRA — GANDHINAGAR
SOLITAIRE — HATHILL,
HABITAT ONE 54 — DEREBAIL
ANANTESSH — CAR STREET,

MANGALURU'S LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in
Follow us on :


SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar